

# ಕಲೆ

## ಸೃಜನಶೀಲತೆಯ ನೆಲೆ

**ಕಲೆಯಲ್ಲಿ ಆಸಕ್ತಿ, ಅದರೊಂದಿಗಿನ ನಿರಂತರ ತುಡಿತ, ಸೃಜನಶೀಲತೆ ಇದ್ದರೆ ಬಿಡುವಿನ ವೇಳೆ ಸದುಪಯೋಗಕ್ಕೆ ಇನ್ನೇನೂ ಬೇಕಿಲ್ಲ. ಬೆಂಗಳೂರಿನ ರೂಪಶ್ರೀ ಅವರ ಕೈಯಲ್ಲಿ ಅರಳುವ ಕರಕುಶಲ ವಸ್ತುಗಳು ಇದೀಗ ಜನಪ್ರಿಯತೆಯ ಹಾದಿ ಹಿಡಿದಿದೆ.**

■ ವೀಣಾ ಜೋಶಿ, ಬಾರ್ಕೂರು

ಸೃಜನಶೀಲತೆಗೆ ಆಸಕ್ತಿ ಜೊತೆಯಾದರೆ ಕಲೆಗಳು ಗರಿಗೆದರಿಕೊಳ್ಳುತ್ತವೆ. ಸಮಯದ ಸದ್ವಿನಿಯೋಗವೂ ಸಾಧ್ಯ. ಮನೆಯಲ್ಲೇ ಇದ್ದು, ಹೋಮ್ ಮೇಕರ್ ಎನ್ನಿಸಿಕೊಳ್ಳುತ್ತಿರುವ ಇಂದಿನ ಮಹಿಳೆ, ಕುಟುಂಬದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾಳೆ. ಅಲ್ಪ ಸ್ವಲ್ಪ ಬಂಡವಾಳದಿಂದ ಚಿಕ್ಕ ಸಂಸ್ಥೆ ಕಟ್ಟಿಕೊಂಡು, ಅದರಲ್ಲೂ ದುಡಿದು, ಸಂಪಾದಿಸಿ ತನ್ನ ಕುಟುಂಬಕ್ಕೆ ಆರ್ಥಿಕವಾಗಿಯೂ ಸಹಕರಿಸುತ್ತಿದ್ದಾಳೆ. ಬೆಂಗಳೂರಿನಲ್ಲಿ ವಾಸಿಸುತ್ತಿರುವ ರೂಪಶ್ರೀ ಹೆಬ್ಬಾಲೆ ತನ್ನ ಗೆಳತಿ ಚಂದ್ರಕಲಾರೊಂದಿಗೆ ಸೇರಿಕೊಂಡು 'ಕಲಾಸೃಷ್ಟಿ' ಎಂಬ ಕಾಟೇಜ್ ಉದ್ಯಮ ಸ್ಥಾಪಿಸಿದ್ದಾರೆ. ಅನೇಕ ಕರಕುಶಲ ವಸ್ತುಗಳು ಇವರ ಕೈಗಳಲ್ಲಿ ಸೃಜನಾತ್ಮಕವಾಗಿ ಅರಳಿವೆ.

ಈಗ ಟ್ರೆಂಡ್ ಎನಿಸಿಕೊಂಡಿರುವ ಸಿಲ್ಕ್ ತ್ರೆಡ್ ಆಭರಣಗಳು, ಟೆರಾಕೋಟ ಆಭರಣಗಳು, ಗ್ಲಾಸ್ ಬೀಡ್ಸ್ ಆ್ಯಂಟಿಕ್ ಪೆಂಡೆಂಟ್ಸ್, ವುಡನ್ ಬೀಡ್ಸ್ ಆಭರಣಗಳನ್ನು ಬಿಡುವಿನ ಸಮಯದಲ್ಲಿ ರೂಪಶ್ರೀ ತಯಾರಿಸುತ್ತಾರೆ. ಕೆಲವೊಮ್ಮೆ ಆರ್ಡರ್ ಮೇರೆಗೆ ತಯಾರಿಸಿ ಕೊಡುತ್ತಾರೆ. ಮದುವೆ ಸಮಯದ ವಿಧಿ ವಿಧಾನಗಳಿಗೆ ಬೇಕಾಗುವ ವಸ್ತುಗಳನ್ನು ಮಾಡಿಕೊಡುತ್ತಾರೆ.

ಮದುಮಗಳ ಜೊತೆ ಅವಳ ಪತಿಗೃಹ ಸೇರುವ ಪಟ್ಟದ ಬೊಂಬೆಗೆ ಅಲಂಕಾರ,(ಮುಂದೆ ದಸರಾ ಸಮಯದಲ್ಲಿ ಬೊಂಬೆ ಕೂರಿಸುವಾಗ ಈ ಪಟ್ಟದ ಬೊಂಬೆಗಳು ಬೇಕೇ ಬೇಕು) ಮೊರದ ಬಾಗಿನದ ಅಲಂಕಾರ, ಹತ್ತಿಯ ಹಾರಗಳು, ಛತ್ರಿ, ಏಳು ಹೆಜ್ಜೆಗಳ ಅಲಂಕಾರ, ಕೊಬ್ಬರಿ ಕೆತ್ತನೆ, ಅರಸಿನ ಕುಂಕುಮ ಪೊಟ್ಟಣಗಳು ಹೀಗೆ ಮದುವೆ ಮನೆಯ ಹತ್ತು ಹಲವು ಅಗತ್ಯಗಳನ್ನು ಪೂರೈಸುತ್ತಾರೆ. ರಂಗೋಲಿ ಹಾಗೂ ಏಳು ಹೆಜ್ಜೆಗಳನ್ನಿಡುವ ರಂಗೋಲಿ ಅಲಂಕಾರ ಇವುಗಳನ್ನು ಮದುವೆ ಮನೆಗಳಿಗೇ ಹೋಗಿ ಮಾಡಿಕೊಟ್ಟು